

# ಅಂತಿಮ ಗುರಿ

■ ಹಿಂದಿಮೂಲ: **ಪ್ರೇಮಚಂದ್**
■ ಕನ್ನಡಕ್ಕೆ: **ಎಚ್.ಎಂ. ಕುಮಾರಸ್ವಾಮಿ**

ಇಂದಿಗೆ ಮೂರು ವರ್ಷಗಳು ಕಳೆದವು. ಇದೇ ಮನೆ, ಇದೇ ಉದ್ಯಾನ, ಇದೇ ಗಂಗೆಯ ದಡ, ಇದೇ ಅಮೃತ ಶಿಲೆಯ ನೀರಿನ ಕೊಳ. ಮತ್ತೆ... ಇದೇ ನಾನು ಹಾಗೂ ಇದೇ ಕಟ್ಟಡಗಳು. ಆದರೆ ಇವುಗಳಿಂದ ಈಗ ಮನಸ್ಸಿನ ಮೇಲೆ ಏನೇನೂ ಪರಿಣಾಮ ಉಂಟಾಗಲಾರದು. ಗಂಗೆಯ ಸುಂದರ ಅಲೆಗಳಿಂದ ಹಾಗೂ ಗಾಳಿಯ ಚಿತ್ತಾಕರ್ಷಕ ತರಂಗಗಳಿಂದ ಮನದಾಳದಲ್ಲಿ ಪುಟಿದೇಳುತ್ತಿದ್ದ ಆ ಉನ್ಮಾದಕ್ಕಾಗಿ ಇಂದು ಮನಸ್ಸು ಹಪಹಪಿಸುತ್ತ ಒದ್ದಾಡುತ್ತದೆ. ಈಗ ಆ ಮನಸ್ಸು ಇಲ್ಲ. ನನ್ನ ಬದುಕಿನ ಆಸರೆಯಾಗಿದ್ದ ಆ ಯುವತಿ ಈಗ ಈ ಪ್ರಪಂಚದಲ್ಲಿ ಇಲ್ಲ.

ಮೋಹಿನಿ ಅತ್ಯಂತ ಸ್ಫುರದ್ರೂಪಿಯಾಗಿದ್ದಳು. ಅವಳ ಸೌಂದರ್ಯವೇ ಒಂದು ವಿಸ್ಮಯವಾಗಿತ್ತು. ಅವಳನ್ನು ಪ್ರೀತಿಸುವುದು ಕಷ್ಟಕರವೇ ಆಗಿತ್ತು. ಆಕೆ ಆರಾಧನೆಗೆ ಅರ್ಹಳಾಗಿದ್ದಳು. ಅವಳ ಮುಖದ ಮೇಲೆ ಆಕರ್ಷಕ ಮತ್ತು ಅಲೌಕಿಕ ಹೊಳಪು ಇರುತ್ತಿತ್ತು. ಆಕೆಯ ಕಣ್ಣುಗಳು ನಾಚಿಕೆ, ಸಂಕೋಚದ ಗಂಭೀರತೆಯಿಂದ ಸದಾ ತುಂಬಿರುತ್ತಿದ್ದುದರ ಜೊತೆಗೆ ಪವಿತ್ರತೆಯ ಮಾದಕತೆ ಹಾಗೂ ಪ್ರೀತಿಯ ತೊರೆಗಳೂ ಆಗಿದ್ದವು. ಆಕೆಯ ಒಂದೊಂದು ನೋಟ, ಒಂದೊಂದು ಕ್ರಿಯೆ, ಒಂದೊಂದು ಮಾತು... ಎಲ್ಲವೂ ಅವಳ ಹೃದಯದಲ್ಲಿನ ಪವಿತ್ರತೆ ಹಾಗೂ ಪ್ರಾಮಾಣಿಕತೆಯ ಪ್ರಭಾವವನ್ನು ನನ್ನ ಹೃದಯದಲ್ಲಿ ತೇಲಿಬಿಡುತ್ತಿದ್ದವು. ಅವಳು ನಾಚಿಕೆ ತುಂಬಿದ ಕಣ್ಣುಗಳಿಂದ ನನ್ನ ಕಡೆಗೆ ದೃಷ್ಟಿ ಬೀರಿದಾಗ ಅವಳ ಆಕರ್ಷಣೆ ಮತ್ತು ಉನ್ಮಾದಕತೆ ನನ್ನ ಹೃದಯದಲ್ಲಿ ಅಲೆಗಳ ರಾಶಿಯನ್ನೇ ಸೃಷ್ಟಿ ಮಾಡಿಬಿಡುತ್ತಿದ್ದವು. ಅವಳ ಕಣ್ಣುಗಳಿಂದ ಹೊಳಪಿನ ಕಿರಣಗಳು ಹೊರಸೂಸುತ್ತಿದ್ದವು. ಆದರೆ ಪ್ರೇಮದ ಪಿಸುಮಾತಿನಿಂದ ಅವಳ ತುಟಿಗಳು ಅಪರಿಚತವಾಗಿದ್ದ ಪ್ರೀತಿಯ ಪ್ರವಾಹದಲ್ಲಿ ಹುಲ್ಲುಕಡ್ಡಿಯ ಹಾಗೆ ತಾನೆ ಸ್ವತಃ ತೇಲಿಹೋಗುತ್ತಿದ್ದರೂ ಸಂಕೇತಗಳಿಂದಲಾದರೂ ಸರಿ, ಆಕೆ ತನ್ನ ಆಳವಾದ ಪ್ರೀತಿಯನ್ನು ಆಕೆಯ ಪ್ರೀತಿಗೆ ಯಾವುದೇ ಎಲ್ಲೆಯೇ ಇರಲಿಲ್ಲ. ಪರಸ್ಪರ ಮಿಲನವೇ ಪ್ರೇಮವೆಂದಾದರೆ ಅದು ಪ್ರೇಮವಲ್ಲ, ಬದಲಾಗಿ ಅದು 'ಕಾಮ'ವೆನಿಸುತ್ತದೆ. ಆದರೆ ಮೋಹಿನಿಯ ಪ್ರೇಮ ಮಿಲನದಲ್ಲಿಯೂ ವಿರಹವೇದನೆಯ ಒಂದು ರೀತಿಯ ಸುಖವನ್ನು ಸೃಜಿಸುತಿತ್ತು. ನನಗಿನ್ನೂ ನೆನಪಿದೆ... ಒಮ್ಮೆ ಅದೇ ಅಮೃತಶಿಲೆಯ ನೀರಿನ ಕೊಳದ ಸನಿಹದಲ್ಲಿ ಬೆಳ್ದಿಂಗಳ ರಾತ್ರಿಯಲ್ಲಿ ಕುಳಿತು ನಾನಾಡಿದ ಪ್ರೇಮಾಲಾಪದ ಮಾತುಗಳಿಂದ ವ್ಯಾಕುಲಗೊಂಡು ಆಕೆ ಹೇಳಿದ್ದಳು... ಓಹ್...! ಆ ಧ್ವನಿ ಈಗಲೂ ನನ್ನ ಹೃದಯದಲ್ಲಿ ಹಚ್ಚಹಸುರಾಗಿದೆ. 'ಮಿಲನ ಪ್ರೇಮದ ಪ್ರಾರಂಭ... ಅಂತ್ಯವಲ್ಲ...' ಪ್ರೇಮದ ಕುರಿತಂತೆ ಇಷ್ಟೊಂದು ಅರ್ಥಪೂರ್ಣವಾದ ಇದಕ್ಕಿಂತ ಮಿಗಿಲಾದ ಶ್ರೇಷ್ಠ ಚಿಂತನೆ ನನ್ನ ಗಮನಕ್ಕೆ ಬಂದಿಲ್ಲ. ಕಣ್ಣಂಚಿನ ಕುಡಿನೋಟದಿಂದ ಹುಟ್ಟಿ ವಿರಹದಲ್ಲಿಯೂ ಹಸಿರು ಹಸಿರಾಗಿರುವ ಪ್ರೀತಿ ಕಾಮವಾಸನೆಯ ಒಂದಿನಿತೂ ಒತ್ತಡವನ್ನು ತಾಳಿಕೊಳ್ಳಲಾರದು. ಇದು ಬಹುಶಃ ನನ್ನ ಆತ್ಮಸ್ತುತಿ ಆಗಬಹುದು. ಆದರೆ ನನ್ನ ದೌರ್ಬಲ್ಯಗಳ ಹೊರತಾಗಿಯೂ ಮೋಹಿನಿಗೆ ನನ್ನಿಂದ ಕಿಂಚಿತ್ತೂ ಬೇಸರವಾದರೂ ಅದು ನನ್ನನ್ನು ಗಾಸಿಗೊಳಿಸಲು ಸಾಕಾಗುತ್ತಿತ್ತು. ಮೋಹಿನಿಯನ್ನು ನನ್ನತ್ತ ಸೆಳೆಯುವಂತಹ ಅದಾವ ವಿಶಾಲವಾದ ಹಾಗೂ ವಿಶೇಷವಾದ ಗುಣ ನನ್ನಲ್ಲಿ ಹುದುಗಿತ್ತು ಎಂದು ಯೋಚಿಸಿದರೆ ನನಗೆ ಆಶ್ಚರ್ಯವೇ ಆಗುತ್ತದೆ. ಸೌಂದರ್ಯ, ಶೌರ್ಯ, ಬದುಕಿನ ಪಾವಿತ್ರತೆ ಇವೇ ಮುಂತಾದ ಶ್ರೇಷ್ಠ ಅಂಶಗಳು ಪ್ರೀತಿ, ಪ್ರೇಮಕ್ಕೆ ತಾವಾಗಿಯೇ ಮಾರುಹೋಗಿಬಿಡುತ್ತವೆ. ಆದರೆ ಇವುಗಳಲ್ಲಿ ಒಂದರ ಬಗ್ಗೆಯಾದರೂ ನಾನು ಹೆಮ್ಮೆಪಟ್ಟುಕೊಳ್ಳುವಂತಿರಲಿಲ್ಲ. ಬಹುಶಃ ನನ್ನ ದೌರ್ಬಲ್ಯವೇ ಆ ಪ್ರೇಮದ ತುಡಿತಕ್ಕೆ ಕಾರಣವಾಗಿರಬಹುದು.

ಬಣ್ಣದ ಆಕರ್ಷಣೆಗೆ ಮರುಳಾಗುವಂತಹ